(ಗೊಂದಲ)

ಶ್ರೀ ಜೆ. ಹೆಚ್. ಪಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರನ್ನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಪ್ರಶ್ನೋತ್ತರ ವೇಳೆಯಲ್ಲಿ ಪ್ರಶ್ನೆಗಳನ್ನು ಕೇಳುವುದಕ್ಕೂ ಉತ್ತರಗಳನ್ನು ಹೇಳುವುದಕ್ಕೂ ನಿಯಮಗಳು ಇರುತ್ತವೆ. ಇದೇನು ಗರಡಿಮನೆಯೇ ? ಏನಿದು ಕೂಗಾಟ ?

(ಗೊಂದಲ)

ಅಧ್ಯಕ್ಷರು.—ಈಗ ಈ ಪ್ರಶ್ನೆಯ ಬಗ್ಗೆ ಈಗಾಗಲೇ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಾಗಿರುತ್ತದೆ. ದಯವಿಟ್ಟು ಎಲ್ಲರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಎಲ್ಲರೂ ಕುಳಿತುಕೊಳ್ಳಿ. ಇದಕ್ಕೆ ಇನ್ನೇನು ಉತ್ತರವಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಇದು ಗರಡಿಮನೆ ಅಲ್ಲ, ಇಲ್ಲಿ ಒಬ್ಬರಿಗೊಬ್ಬರು ಕುಸ್ತಿ ಮಾಡಲಿಕ್ಕೆ ಬಂದಿಲ್ಲ. ಮಾನ್ಯ ಸಚಿವರ ಬಾಯಲ್ಲಿ ಈ ಮಾತು ಬರಬಾರದು.

(ಗೊಂದಲ)

ಆ ಕಡೆ ಮಾನ್ಯ ಸದಸ್ಯರುಗಳು ಮಾತನಾಡಿದರೆ ಚೆನ್ನಾಗಿರುತ್ತದೆ. ಈ ಕಡೆ ಸದಸ್ಯರು ಮಾತನಾಡಿದರೆ ಚೆನ್ನಾಗಿರುವುದಿಲ್ಲ. ಅವರು ಎದ್ದು ಎದ್ದು ನಿಂತು ಕೇಳುತ್ತಿರುತ್ತಾರೆ. ನಾವೇನು ಹೇಳಿದರೂ ತಪ್ಪಾಗುತ್ತದೆ.

ಅಧ್ಯಕ್ಷರು.—ಇದನ್ನು ಮುಕ್ತಾಯ ಮಾಡುತ್ತೇನೆ, ಮತ್ತೆ ಇದನ್ನು ಅರ್ಧ ಗಂಟೆ ಕಾಲದ ಚರ್ಚೆಯಾಗಿ ತೆಗೆದುಕೊಳ್ಳುತ್ತೇನೆ.

(ಗೊಂದಲ)

I have closed the matter. I have allowed half-an-hour discussion on it. ಈಗ ಕೆ. ಹೆಚ್.-ಪಾಟೀಲ್ ಮತ್ತು ಮಾನ್ಯ ರವೀಶ್ ಕುಮಾರ್‌ರವರ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಆದ್ದರಿಂದ ಅವರ ಪ್ರಶ್ನೆಗಳನ್ನು ತತ್ಹಿಂಡಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಕಾರ್ಮಿಕ ಮಂತ್ರಿಗಳಿಗೆ ಪ್ರಶ್ನೆ ಕಳುಹಿಸಿದ್ದೇನೆ. ಇದು ಹೇಗೆ ಇವರಿಗೆ ಅಡ್ರೆಸ್ ಆಗಿರುತ್ತದೆ ?

ಅಧ್ಯಕ್ಷರು.—ಗ್ರೂಪ್ 'ಇ' ಗೆ ಟ್ರಾನ್ಸ್‌ಫರ್ ಮಾಡಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸಂತೋಷ.

ಬೀದರಿನ ಲಂಬಾಣಿ ತಾಂಡಾಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಬಗ್ಗೆ.

೬೮ (೩೫೭) ಶ್ರೀ ಬಸವರಾಜ ಪಾಟೀಲ್ (ಹುಮನಾಬಾದ್).—ಮಾನ್ಯ ಭಾರಿ, ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೀದರ್ ಜಿಲ್ಲೆಯಲ್ಲಿರುವ ಲಂಬಾಣಿ ತಾಂಡಗಳ ಸಂಖ್ಯೆ ಎಷ್ಟು ?

ಆ) ಸದರಿ ತಾಂಡಗಳಲ್ಲಿ ವಿದ್ಯುತ್ ದೀಪ ಹೊಂದಿರುವುವು ಎಷ್ಟು ಹಾಗೂ ವಿದ್ಯುತ್ ತೊಂದರೆ ಇರುವುವು ಎಷ್ಟು ?

ಇ) ಉಳಿದ ತಾಂಡಗಳಿಗೆ ಯಾವಾಗ ವಿದ್ಯುತ್ ದೀಪ ಒದಗಿಸಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುಚ್ಛಕ್ತಿ ಸಚಿವರು).—

ಅ) ಬೀದರ್ ಜಿಲ್ಲೆಯಲ್ಲಿ ೧೬೫ ಲಂಬಾಣಿ ತಾಂಡಗಳಿವೆ.

ಆ) ಇದುವರೆಗೆ ೧೩ ತಾಂಡಗಳಿಗೆ ವಿದ್ಯುತ್ ಒದಗಿಸಲಾಗಿದೆ. ವಿದ್ಯುದ್ದೀಕರಣವಾಗದ ೧೫೨ ತಾಂಡಗಳಿವೆ.

ಇ) ಬೀದರ್ ಜಿಲ್ಲೆಯ ಔರಾದ್, ಹುಮ್ನಾಬಾದ್, ಬೀದರ್, ಬಸವಕಲ್ಯಾಣ ತಾಲ್ಲೂಕು ಗಳಲ್ಲಿ ಒಟ್ಟು ೧೩೪ ತಾಂಡಗಳ ವಿದ್ಯುದ್ದೀಕರಣಕ್ಕೆ ಮಂಜೂರಾತಿ ಸಿಕ್ಕಿದೆ. ಹಾಲಿ ಹುಮ್ನಾಬಾದ್ ತಾಲ್ಲೂಕಿನಲ್ಲಿ ೩೩ ತಾಂಡಗಳು ಮತ್ತು ಬೀದರ್ ತಾಲ್ಲೂಕಿನಲ್ಲಿ ೫೫ ತಾಂಡಗಳ ವಿದ್ಯುದ್ದೀಕರಣ ಕಾರ್ಯ ಪ್ರಗತಿಯಲ್ಲಿದ್ದು, ಬಸವ ಕಲ್ಯಾಣ ತಾಲ್ಲೂಕಿನಲ್ಲಿ ೨ ತಾಂಡಗಳ ವಿದ್ಯುದ್ದೀಕರಣ ಈಗಾಗಲೇ ಆಗಿದೆ. ೧೯೮೭-೮೮ರಲ್ಲಿ ಈ ಜಿಲ್ಲೆಯಲ್ಲಿ ೭೧ ತಾಂಡಗಳ ವಿದ್ಯುದ್ದೀಕರಣದ ಗುರಿ ಇದೆ. ಜಿಲ್ಲೆಯಲ್ಲಿ ಬಾಕಿ ಇರುವ ಎಲ್ಲಾ ತಾಂಡಗಳನ್ನು ಇನ್ನು ಎರಡು ವರ್ಷಗಳಲ್ಲಿ ವಿದ್ಯುದ್ದೀಕರಣಗೊಳಿಸುವ ಗುರಿ ಇದೆ.

ಶ್ರೀ ಬಸವರಾಜ ಪಾಟೀಲ್.—೧೯೮೭-೮೮ನೇ ಸಾಲಿನಲ್ಲಿ ೭೧ ತಾಂಡಗಳ ವಿದ್ಯುದೀಕರಣದ ಗುರಿ ಇದೆ ಎಂದು ಹೇಳಿದ್ದೀರಿ. ಆ ಕಾರ್ಯವನ್ನು ಸರ್ಕಾರ ಯಾವಾಗ ಪ್ರಾರಂಭ ಮಾಡುತ್ತದೆ ?

ಶ್ರೀ ಜೆ. ಹೆಚ್. ಪಟೇಲ್.—ಪ್ರತಿವರ್ಷ ನಾವು ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಯವರಿಗೆ ಟಾರ್ಗೆಟ್ ಇಟ್ಟುಕೊಂಡು ಕಳುಹಿಸುತ್ತೆವೆ, ಕೆಲಸ ಪ್ರಾರಂಭವಾಗುವುದು ಮಾರ್ಚ್‌ನಿಂದ. ೧೯೮೭-೮೮ರ ಕೆಲಸ ಶುರುವಾಗಿದೆ. ಮುಂದಿನ ವರ್ಷ ಮಾರ್ಚ್‌ನಿಂದ ೭೧ ತಾಂಡಗಳ ಕೆಲಸವನ್ನು ಶುರು ಮಾಡುತ್ತಾರೆ.

ಶ್ರೀ ಬಸವರಾಜ ಪಾಟೀಲ್.—ಆ ೭೧ ತಾಂಡಾಗಳ ಹೆಸರಿನ ಪಟ್ಟಿ ಇದೆಯೆ ?

ಶ್ರೀ ಜೆ. ಹೆಚ್. ಪಟೇಲ್.—ಈಗ ನನ್ನ ಹತ್ತಿರ ಇಲ್ಲ, ಆಮೇಲೆ ಕಳುಹಿಸಿ ಕೊಡುತ್ತೇನೆ.

ಶ್ರೀ ಬಸವರಾಜ ಪಾಟೀಲ್.—ಆಯಿತು. ೧೩೪ ತಾಂಡಾಗಳದ್ದು ವಿದ್ಯುದೀಕರಣವಾಗಿದೆ ಎಂದು ಹೇಳಿದ್ದೀರಿ. ಅದರ ಪಟ್ಟಿಯನ್ನೂ ಅಂದರೆ ಯಾವ್ಯಾವ ತಾಂಡಾಗಳಿಗೆ ಎಲ್ಲೆಲ್ಲಿ ವಿದ್ಯುತ್‌ನ್ನು ಒದಗಿಸಲಾಗಿದೆ ಎಂಬ ಪಟ್ಟಿಯನ್ನು ಒದಗಿಸಿದರೆ ಒಳ್ಳೆಯದು. ಹಾಗೂ ಇನ್ನೂ ಯಾವ ಯಾವ ತಾಂಡಾಗಳಿಗೆ ಎಲ್ಲೆಲ್ಲಿ ವಿದ್ಯುತ್ ಒದಗಿಸಬೇಕಾಗಿದೆ ಎಂಬ ಪಟ್ಟಿಯನ್ನು ಕೊಡುತ್ತೀರಾ ?

ಶ್ರೀ ಜೆ. ಹೆಚ್, ಪಟೇಲ್.—ಔರಾದ್ ತಾಲ್ಲೂಕಿನಲ್ಲಿ ೭೪ ತಾಂಡಗಳಿಗೆ, ಬೀದರ್ ತಾಲ್ಲೂಕಿನಲ್ಲಿ ೧೪ ತಾಂಡಾಗಳಿಗೆ, ಹುಮ್ನಾಬಾದ್ ತಾಲ್ಲೂಕಿನಲ್ಲಿ ೧೧ ತಾಂಡಾಗಳಿಗೆ ಬಸವ ಕಲ್ಯಾಣ ತಾಲ್ಲೂಕಿನಲ್ಲಿ ೩೩ ತಾಂಡಾಗಳಿಗೆ, ಭಾಲ್ಕಿಯಲ್ಲಿ ೨೦ ತಾಂಡಾಗಳಿಗೆ ಹೀಗೆ ಒಟ್ಟು ೧೩೨ ತಾಂಡಗಳಿಗೆ ವಿದ್ಯುತ್ತನ್ನು ಒದಗಿಸ ಬೇಕಾಗಿದೆ. ಆ ೧೩೨ನ್ನು ನಮ್ಮ ಕ್ಯೂಮಿ ಗೆ ಕಳುಹಿಸಿಕೊಟ್ಟಿದ್ದೇವೆ. ಅವುಗಳ ಹೆಸರು ಬೇಕೆಂದರೆ ಆ ಪಟ್ಟಿಯನ್ನು ನಂತರ ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

ಕರ್ನಾಟಕ ವಿದ್ಯುತ್ ಮಂಡಳಿಯವರಿಂದ ವಿದ್ಯುತ್ ದರದ ಹೆಚ್ಚಳ

೬೯ (೧೫೦) ಶ್ರೀ ರೋಶನ್‌ಬೇಗ್ (ಶಿವಾಜಿನಗರ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಹಾಗೂ ವಿದ್ಯುತ್‌ಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸು ವರೇ:—

ಅ) ಪ್ರತಿ ವರ್ಗದ ಗ್ರಾಹಕರಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಪರಿಷ್ಕರಿಸಿದ ವಿದ್ಯುತ್ ದರಗಳ ವಿವರ (ಹಿಂದಿನ ಮತ್ತು ಪರಿಷ್ಕೃತ ವಿದ್ಯುತ್ ದರಗಳನ್ನು ಎ. ಇ. ಹೆಚ್ ಮತ್ತು ಲೋ ಟೆನ್ಷನ್ ಸೇರಿ ಪ್ರತಿ ವರ್ಗದ ಬಳಕೆದಾರರೂ ಸೇರಿದಂತೆ ವಿವರ ಒದಗಿಸುವುದು) ?

ಆ) ಪರಿಷ್ಕೃತ ಟ್ಯಾರಿಫ್ ವಿರುದ್ಧ ಸಾರ್ವಜನಿಕರು ಆಂದೋಳನ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಪರಿಷ್ಕೃತ ಟ್ಯಾರಿಫನ್ನು ರದ್ದುಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮ ವೇನು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಸಚಿವರು).—

ಅ) ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದೆ.

ಆ) ಕೆಲವು ಸಾರ್ವಜನಿಕರಿಂದ ಪ್ರತಿಭಟನೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಎಲೆಕ್ಟ್ರಿಸಿಟಿ ಆಕ್ಟ್ ಪ್ರಕಾರ ಮಂಡಳಿಯು ತನ್ನ ಬಂಡವಾಳದ ಮೇಲೆ ಶೇಕಡ ೩ ರಷ್ಟು ಹೆಚ್ಚುವರಿ ಗಳಿಸಬೇಕು, ಮಂಡಳಿ ಖರೀದಿಸುವ ವಿದ್ಯುಚ್ಛಕ್ತಿ ಬೆಲೆಯಲ್ಲಿ ಏರಿಕೆ, ಸಾಮಾನುಗಳ ದರದಲ್ಲಿನ ಏರಿಕೆ ರೈಲ್ವೆ ಸಾಗಾಣಿಕೆ ದರ ಸಂಬಳ ಮುಂತಾದವುಗಳಲ್ಲಿ ಏರಿಕೆಯಿಂದಾಗಿ ಟ್ಯಾರಿಫನ್ನು ಪರಿಷ್ಕರಿಸುವುದು ಅಗತ್ಯವಾಯಿತು. ಹೀಗೆ ಈ ಏರಿಕೆಯು ಅನಿವಾರ್ಯವಾದ್ದರಿಂದ ಅದನ್ನು ರದ್ದು ಗೊಳಿಸಲು ಸಾಧ್ಯವಿಲ್ಲ.